# ವಾರ್ಡ್ ಸಭೆ ಸಂಖ್ಯೆ.53

ದಿನಾಂಕ:.04.03.2023 ರಂದು ಸಮಯ 11:30 ಗಂಟೆಗೆ ವಾರ್ಡ್.ಸಂಖ್ಯೆ.50 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್_ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಕಾರ್ಯದರ್ಶಿಗಳು) ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀ ಎಸ್.ಆರ್ ಶ್ರೀನಿವಾಸ್ ನೋಡಲ್ ಅಧಿಕಾರಿ ರವರು, ವಾರ್ಡ್.ಸಂಖ್ಯೆ.50, ಮಾರಪ್ಪನಪಾಳ್ಯ. (ಅಧ್ಯಕ್ಷರು)
2. ಶ್ರೀ ಪ್ರದೀಪ್‌ಕುಮಾರ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.50, ಮಾರಪ್ಪನಪಾಳ್ಯ
3. ಶ್ರೀ ಓಂಪ್ರಕಾಶ್ ತೋಟಗಾರಿಕೆ ಅಧೀಕ್ಷಕರು, ವಾರ್ಡ್ ಸಂಖ್ಯೆ.50, ಮಾರಪ್ಪನಪಾಳ್ಯ.
4. ಶ್ರೀ ದಿನೇಶ್ ಕುಮಾರ್ ಸ.ಅ. (ಬೆಸ್ಕಾಂ)
5. ಶ್ರೀ. ಗೋಪಿ, ಸದಸ್ಯರು
6. ಶ್ರೀ. ಛಾಯಾಪತಿ ಎಂ. ಕಿರಿಯ ಆರೋಗ್ಯ ಪರಿವೀಕ್ಷಕರು, ಬಿಬಿಎಂಪಿ
7. ಶ್ರೀ. ಪುಟ್ಟಸ್ವಾಮಿ ಸದಸ್ಯರು.
8. ಶ್ರೀ ವೈ.ಆರ್. ವೆಂಕಟೇಶ್ ಸದಸ್ಯರು.
9. ಶ್ರೀಮತಿ. ಪ್ರೇಮ. ಸದ್ಯಸರು
10. ಡಾ॥ ಶ್ರೀ ಶಶಿಕುಮಾರ್ ಎಸ್.ಆರ್ ಆರೋಗ್ಯ ವೈದ್ಯಾಧಿಕಾರಿಗಳು ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರ,
11. ಶ್ರೀ ಅಶ್ವಥನಾರಾಯಣ ಆರ್.ಎಂ.ಸಿ.ಯಾರ್ಡ್ ಪೋಲೀಸ್ ಠಾಣೆ
12. ಶ್ರೀ ರಾಜೇಶ್, ಸದಸ್ಯರು

ಕಾರ್ಯದರ್ಶಿರವರು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಿದರು

| ಕ್ರ.ಸಂ | ವಿವರಣೆ | ಕ್ರಮ |
|---|---|---|
| 01 | ಅಧ್ಯಕ್ಷರು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | - |
| 02 | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | - |
| 03 | ಕಣ್ವ ಆಸ್ಪಿಟಲ್ ರಸ್ತೆ ಮತ್ತು ಟಯೋಟಾ ಶೋ ರೂಂ ರಸ್ತೆಗಳಲ್ಲಿ ವಾಹನಗಳನ್ನು ರಸ್ತೆಯ ಬದಿಯಲ್ಲಿಯೆ ನಿಲ್ಲಿಸಿರುವುದನ್ನು ತೆರವುಗೊಳಿಲು ಸಭೆಗೆ ಡಾ॥ನಾಗೇಂದ್ರರವರು ಮತ್ತು ಸಾರ್ವಜನಿಕರು ಕೋರಿದರು. ಅದಕ್ಕೆ ಸಂಬಧಪಟ್ಟ ಪೊಲೀಸ್ ಅಧಿಕಾರಿಗಳು ಕ್ರಮ ಕೈಗೊಂಡು ಮುಂದಿನ ಸಭೆಗೆ ಮಾಹಿತಿ ನೀಡಲಾಗುವುದು ಎಂದು ತಿಳಸಿದರು | ಮುಂಬರುವ ಸಭೆಗೆ ಸಂಪೂರ್ಣ ಮಾಹಿತಿ ನೀಡಲಾಗುವುದು ಎಂದು ಸಭೆಗೆ ಭರವಸೆ ನೀಡಿರುತ್ತಾರೆ. |
| 04 | ಸಂಚಾರಿ ಪೋಲೀಸ್ ಠಾಣೆ ಯಶವಂತಪುರರವರಿಗೆ ಕಿಯಾ ಮೋಟರ್ಸ್ ಬಳಿ ನೋ–ಪಾರ್ಕಿಂಗ್ ಬೋರ್ಡ್ ಅಳವಡಿಸಲು ಎಲಿನಾ ವಸತಿ ಗೃಹದ ನಿವಾಸಿಗಳು ಕೋರಿರುತ್ತಾರೆ | ಯಶವಂತಪುರ ಸಂಚಾರಿ ಪೋಲೀಸ್ ಠಾಣೆ |
| 05 | ಶಂಕರನಗರ ಮುಖ್ಯರಸ್ತೆ ಅಶೋಕ ಹೈಟ್ಸ್ ಬಳಿ ಇರುವ ಬೆಸ್ಕಾಂ ಟ್ರಾನ್ಸ್‌ಫರಂನ್ನು ಸ್ಥಳಾಂತರಿಸಲು ಡಾ॥ನಾಗೇಂದ್ರರವರು ಕೋರಿರುತ್ತಾರೆ ಅದಕ್ಕೆ ಪೂರಕವಾಗಿ ಮುಂಬರುವ ಸಭೆಗೆ ಸಂಪೂರ್ಣ ಲಿಖಿತ ಮಾಹಿತಿ ನೀಡಲಾಗುವುದು ಎಂದು ಸಭೆಗೆ ಭರವಸೆ ನೀಡಿರುತ್ತಾರೆ. | ಬೆಸ್ಕಾಂ ಇಲಾಖೆ |

Scanned with OKEN Scanner

| | | |
|---|---|---|
| 06 | ವಾರ್ಡ್ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ನಿರ್ವಹಣೆ ಬಗ್ಗೆ ಮಾಹಿತಿಯನ್ನು ಜ್ಞಾನನಾಗೇಂದ್ರರವರು ಸಭೆಗೆ ಕೋರಿರುತ್ತಾರೆ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಮುಂಬರುವ ಸಭೆಗೆ ಸಂಪೂರ್ಣ ಮಾಹಿತಿ ನೀಡಲಾಗುವುದು ಎಂದು ಸಭೆಗೆ ಭರವಸೆ ನೀಡಿರುತ್ತಾರೆ. | ತೋಟಗಾರಿಕೆ ಇಲಾಖೆ |
| 07 | ಕೆ.ಎಚ್.ಬಿ. ಕಾಲೋನಿ ಮತ್ತು ಗೌತಮ ನಗರದಲ್ಲಿ ಬೀದಿ ದೀಪದ ಕಂಬ ಹಾಕಿ ಮತ್ತು ಲೈಟ್ ಅಳವಡಿಸಲು ಸದಸ್ಯರಾದ ಶ್ರೀ ಬಿ.ಆರ್. ಪಟ್ಟಸ್ವಾಮಿ ಹಾಗು ಶ್ರೀ ಜಯಪಾಲ್ ಸಭೆಯಲ್ಲಿ ಕೋರಿರುತ್ತಾರೆ | ಬೀದಿ ದೀಪದ ಇಲಾಖೆ |
| 08 | ವಾರ್ಡ್‌ನಲ್ಲಿರುವ ಎಲ್ಲಾ ಹೈ-ಮಾಸ್ಟ್ ಕಂಬಗಳಿಗೆ ಎಲ್.ಇ.ಡಿ. ಲೈಟ್ ಮತ್ತು ಟೈಮರ್ ಅಳವಡಿಸಲು ಸಭೆಯಲ್ಲಿ ಎಲ್ಲಾ ಸದಸ್ಯರು ಒಕ್ಕೊರಲಾಗಿ ಕೋರಿರುತ್ತಾರೆ | ಬೀದಿ ದೀಪದ ಇಲಾಖೆ |
| 09 | ಸೋಮೇಶ್ವರನಗರದ ಮುಖ್ಯ ರಸ್ತೆಯ ಎರಡು ಬದಿಗಳಲ್ಲಿ ಒಣಗಿದ ಮರದ ಕೊಂಬೆಗಳನ್ನು ತೆರವುಗೊಳಿಸಲು ಸಭೆಯಲ್ಲಿ ಶ್ರೀ ಗೋಪಿಯವರು ಕೋರಿರುತ್ತಾರೆ. | ಅರಣ್ಯ ಇಲಾಖೆ |
| 10 | ಗೋವರ್ಧನ ಚಿತ್ರಮಂದಿರದ ಹಿಂಭಾಗ ಫುಡ್ ಗೋಡೌನ್ ಹತ್ತಿರ ಹಲವು ದಿನಗಳಿಂದ ಲಾರಿಗಳನ್ನು ನಿಲ್ಲಿಸಿರುತ್ತಾರೆ ಅದರಿಂದ ಸಾರ್ವಜನಿಕರಿಗೆ ಹಾಗೂ ಅಲ್ಲಿನ ಸ್ಥಳೀಯ ನಿವಾಸಿಗಳಿಗೆ ಓಡಾಡಲು ತೊಂದರೆ ಆಗುತ್ತಿದ್ದು ಆದಷ್ಟು ಬೇಗ ತೆರವುಗೊಳಿಸಲು ಸಾರ್ವಜನಿಕರು ಸಭೆಗೆ ಕೋರಿರುತ್ತಾರೆ | ಯಶವಂತಪುರ ಸಂಚಾರಿ ಪೊಲೀಸ್ ಠಾಣೆ |
| 11 | ಕಾರ್ಯದರ್ಶಿಗಳು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನಗಳನ್ನು ಹೇಳುತ್ತ ಸಭೆಯನ್ನು ಮುಕ್ತಾಯಗೊಳಿಸಿದರು. | – |

ನೋಡಲ್ ಅಧಿಕಾರಿ
ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.50
ಮಾರಪ್ಪನಪಾಳ್ಯ

Scanned with OKEN Scanner